# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :386
ಸದಸ್ಯರ ಹೆಸರು :ಶ್ರೀ ಮಂಜುನಾಥ್ ಭಂಡಾರಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ :10.12.2025
ಉತ್ತರಿಸುವ ಸಚಿವರು :ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ವಿವಿಧ ಪ್ರದೇಶಗಳು ಕರ್ನಾಟಕ ಏಕೀಕರಣ ಆಗುವ ಮೊದಲು ಮೈಸೂರು ಪ್ರಾಂತ್ಯ, ಹೈದರಬಾದ್ ಪ್ರಾಂತ್ಯ ಮತ್ತು ಮದ್ರಾಸ್ ಪ್ರಾಂತ್ಯಗಳು ಆಯಾಯ ಪ್ರಾಂತೀಯ ರೀತಿಯ ಕಂದಾಯ ಆಡಳಿತಾತ್ಮಕ ವ್ಯವಸ್ಥೆಯನ್ನು ಹೊಂದಿದ್ದು, ಅವುಗಳನ್ನು ಏಕೀಕರಣ ಮಾಡಿದ ನಂತರದ ಸಂದರ್ಭದಲ್ಲಿ ಏಕರೂಪತೆಗೆ ಕ್ರಮವಹಿಸಲಾಗಿದೆಯೇ?: | ಭೂಮಿ, ಭೂ ಕಂದಾಯದ ನಿರ್ಧರಣೆ ಮತ್ತು ವಸೂಲಿ, ಭೂ ಕಂದಾಯದ ಆಡಳಿತ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದ ಕಾನೂನನ್ನು ಒಂದುಗೂಡಿಸಿ ಸರ್ಕಾರವು ದಿನಾಂಕ: 01.04.1964 ರಿಂದ ಜಾರಿಗೆ ಬರುವಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಅನ್ನು ಜಾರಿಗೆ ತಂದಿದೆ. |
| ಆ) | ಈ ರೀತಿ ಕ್ರಮ ವಹಿಸದ ಕಾರಣ ಯಾವುದೇ ಏಕರೂಪದ ರಾಜ್ಯಮಟ್ಟದ ನಿಯಮಗಳು ಆಯಾಯ ಪ್ರಾಂತ್ಯದ ಈಗಿನ ಜಿಲ್ಲೆಗಳಲ್ಲಿ ನಿಯಮಗಳನ್ನು ಪಾಲಿಸುವಾಗ ಪ್ರಾದೇಶಿಕ ಮಟ್ಟದಲ್ಲಿ ಸಮಸ್ಯೆಯಾಗುತ್ತಿರುವುದು ಸರ್ಕರ ಗಮನಿಸಿದೆಯೇ: | ಪ್ರಶ್ನೆ ಉದ್ಭವಿಸುವುದಿಲ್ಲ. |
| ಇ) | ರಾಜ್ಯ ಮಟ್ಟದ ನಿಯಮಗಳನ್ನು ರೂಪಿಸುವಾಗ ಆಯಾಯ ಪ್ರಾಂತ್ಯಗಳಲ್ಲಿ ಹಿಂದೆ ಚಾಲ್ತಿಯಲ್ಲಿದ್ದ ಮತ್ತು ಈಗಲೂ ಭಾಗಶಃ ಚಾಲ್ತಿಯಲ್ಲಿರುವ ನಿಯಮಗಳಿಗೆ ಪೂರಕವಾಗಿ ಭೂಕಂದಾಯ ಪ್ರಕರಣಗಳಾದ, ಮೂಲ ಗೇಣಿ, ಮೂಲಿ ಹಕ್ಕು, ಚಾಲ ಗೇಣಿ, ಡಿ ಸಿ ಮನ್ನಾ ಭೂಮಿಗಳು, ಪ್ರತ್ಯೇಕ ಭೂ ಪರಿವರ್ತನೆ ಪದ್ಧತಿಗಳು, ಹರಡಿಕೊಂಡಿರುವ ಮನೆಗಳು, ಗ್ರಾಮಠಾಣಾ ಇಲ್ಲದಿರುವುದು, ನಿವೇಶನ ಬಡಾವಣೆ ವಿನ್ಯಾಸ, ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಸಮಸ್ಯೆಗಳನ್ನು ಪರಿಹರಿಸಲು ಸಂಬಂಧಪಟ್ಟ ಇಲಾಖೆಯೊಂದಿಗೆ ಸಮನ್ವಯ ಸಾಧಿಸಲು ಸರ್ಕಾರ ವಹಿಸಿರುವ ಕ್ರಮವೇನು: | ಭೂಮಿ, ಭೂ ಕಂದಾಯದ ನಿರ್ಧರಣೆ ಮತ್ತು ವಸೂಲಿ, ಭೂ ಕಂದಾಯದ ಆಡಳಿತ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದ ಕಾನೂನನ್ನು ಒಂದುಗೂಡಿಸಿ ಸರ್ಕಾರವು ದಿನಾಂಕ: 01.04.1964 ರಿಂದ ಜಾರಿಗೆ ಬರುವಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಅನ್ನು ಜಾರಿಗೆ ತಂದಿದ್ದು, ಅದರಡಿಯಲ್ಲಿ, ಕರ್ನಾಟಕ ಭೂ ಕಂದಾಯ ನಿಯಮಗಳು, 1966 ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ವನ್ನು ರೂಪಿಸಲಾಗಿದೆ. |
| ಈ) | ಈ ಸಮನ್ವಯತೆ ಕೊರತೆಯ ಕಾರಣ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಚಿಕ್ಕಮಗಳೂರು ಜಿಲ್ಲೆಗಳ ಜನರು ವಸತಿ ಹಲವು ಪರವಾನಿಗೆಗಳು, ಸರ್ವ ಋತು ರಸ್ತೆ ಸಂಪರ್ಕ ಇತ್ಯಾದಿ ಮೂಲಭೂತ ಸೌಕರ್ಯ ತೊಂದರೆ ಅನುಭವಿಸುತ್ತಿರುವದನ್ನು ಸರಿಪಡಿಸಲು ಸರಕಾರ ಕೈಗೊಂಡ ಕ್ರಮಗಳೇನು: | ಕರ್ನಾಟಕ ರಾಜ್ಯದಲ್ಲಿ ಭೂಮಿಗೆ ಸಂಬಂಧಪಟ್ಟಂತೆ, ಗೇಣಿದಾರರಿಗೆ ಒಡೆತನವನ್ನು ಪ್ರದಾನ ಮಾಡುವುದಕ್ಕೆ, ಭೂ ಹಿಡುವಳಿಯ ಗರಿಷ್ಠ ಮಿತಿಗೆ ಸಂಬಂಧಿಸಿದಂತೆ ಮತ್ತು ಇದರಲ್ಲಿ ಇತರೆ ವಿಷಯಗಳಿಗೆ ಏಕರೂಪದ ಕಾನೂನನ್ನು ರೂಪಿಸುವ ದೃಷ್ಟಿಯಿಂದ ಕರ್ನಾಟಕ ಭೂ ಸುಧಾರಣೆಗಳ ಕಾಯ್ದೆ, 1961ಅನ್ನು ಜಾರಿಗೆ ತರಲಾಗಿದೆ ಸದರಿ ಕಾಯೆಯಡಿಯಲ್ಲಿ ಕರ್ನಾಟಕ ಭೂ ಸುಧಾರಣೆಗಳ ನಿಯಮಗಳು, 1974 ಅನ್ನು ರೂಪಿಸಲಾಗಿದೆ. |

| | | |
|---|---|---|
| ಉ) | ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಸರ್ಕಾರಿ ಜಾಗದಲ್ಲಿರುವ, ರಸ್ತೆಯಾಗಿ ಉಪಯೋಗಿಸುವ ಖಾಸಗಿ ಸಂಪರ್ಕ ರಸ್ತೆಯಿರುವ ಜಾಗಗಳನ್ನು ಒಂದು ಸಲಕ್ಕೆ ಅಧಿಸೂಚಿಸುವ ಬಗ್ಗೆ ಸರ್ಕಾರದಿಂದ ಯಾವಾಗ ಕ್ರಮವಹಿಸಲಾಗುವುದು? | ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ.23 ಎಲ್.ಜಿ.ಪಿ. 2022, ದಿನಾಂಕ: 20.10.2023ರಲ್ಲಿ ನೀಡಿರುವ ನಿರ್ದೇಶನಗಳಂತೆ ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಆರ್‌ಡಿ 180 ಎಲ್‌ಜಿಕ್ಯೂ 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು